# ನನಗೆ ಮುಖವಾಡಗಳಿಲ್ಲ



**ಸ್ವಪ್ನ ಕೃಷ್ಣ**

**ಝೀ ಕನ್ನಡದ 'ಸತ್ಯ' ನಿರ್ದೇಶಕಿ**

◆ ಬಣ್ಣದ ಗೀಳು ನಿಮ್ಮಲ್ಲಿ ಬೆಳೆದಿದ್ದು ಹೇಗೆ?

ನಾನು ಹತ್ತನೇ ತರಗತಿಯಲ್ಲಿ ಓದುತ್ತಿದ್ದಾಗ ಆಕಸ್ಮಿಕವಾಗಿ ಫಣಿರಾಮಚಂದ್ರ ಅವರ 'ದಂಡಪಿಂಡಗಳು' ಸೀರಿಯಲ್‌ನಲ್ಲಿ ಅಭಿನಯಿಸಲು ಅವಕಾಶ ಸಿಕ್ಕಿತ್ತು. ಆಗ ನಟನೆ ವೃತ್ತಿಯಾಗಿ ತೆಗೆದುಕೊಳ್ಳಬೇಕು ಎಂದು ಯೋಚನೆಯನ್ನೂ ಮಾಡಿರಲಿಲ್ಲ. ಕ್ರಮೇಣ ಒಂದಾದ ಮೇಲೆ ಒಂದು ಅವಕಾಶಗಳು ಸಿಕ್ಕವು. ಅದರ ಪರಿಣಾಮ ನಟನೆ ವೃತ್ತಿಯಾಗಿ ಪರಿವರ್ತನೆ ಆಯಿತು.

◆ ತೆರೆಯ ಹಿಂದಿನ ಬದುಕು ಖುಷಿ ಕೊಡುತ್ತಾ?

ತೆರೆಯ ಹಿಂದಿನ ಕೆಲಸ ಗುರುತಿಸುವುದು ತುಂಬ ಕಷ್ಟ ನಿಜ. ಆದರೆ ಈಗ ಅಂತಹ ಪರಿಸ್ಥಿತಿ ಇಲ್ಲ. ತೆರೆಯ ಹಿಂದಿನ ಕೆಲಸದಿಂದಲೇ ತೆರೆಯನ್ನು ನೋಡುವ ದೃಷ್ಟಿಕೋನ ಬೇರೀತಾ ಇದೆ. ಈ ರೀತಿಯ ಬದಲಾವಣೆ ಬಗ್ಗೆ ಖುಷಿ ಇದೆ. ವೃತ್ತಿಗೆ ತಕ್ಕ ಗೌರವವನ್ನು ಸಮಾಜ ನೀಡುತ್ತಲೇ ಇದೆ. ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿದ ನಂತರ ನನಗೆ ಬೇರೆ ಜವಾಬ್ದಾರಿಗಳು ಬಂದವು. ನಿತ್ಯ ಎಡಿಟಿಂಗ್ ಟೇಬಲ್ ಮೇಲೆ ಕುಳಿತು ಕೆಲಸ ಮಾಡುವಾಗ ನಿರ್ದೇಶನದ ಬಗ್ಗೆ ಒಲವು ಮೂಡಿತು. ನಟಿಸುತ್ತಿದ್ದಾಗ ಕೂಡ ನಿರ್ದೇಶಕಿ ಆಗಬೇಕು ಎನ್ನುವ ಆಸೆ ಇತ್ತು. ಅದು ಇಷ್ಟು ಬೇಗ ಈಡೇರುತ್ತದೆ ಎಂದು ಅನಿಸಿರಲಿಲ್ಲ.

◆ ನಿಮ್ಮ ಕನಸಿನ ಕಲಾಕೃತಿ ಯಾವುದು?

ಇವತ್ತಿನ ಸಂದರ್ಭದಲ್ಲಿ ಮಕ್ಕಳು ಬೆಳೆಯುವ ರೀತಿ, ಹಿರಿಯರ ಜತೆ ಅವರ ನಡವಳಿಕೆಯನ್ನು ಒಂದು ಚೌಕಟ್ಟಿಗೆ ತರಬೇಕಿದೆ. ಅವಿಭಕ್ತ ಕುಟುಂಬಗಳು ಕಡಿಮೆ ಆಗುತ್ತಾ, ವಿಭಕ್ತ ಚಿಕ್ಕ ಕುಟುಂಬಗಳು ಹೆಚ್ಚಾಗುತ್ತಿವೆ. ಅದನ್ನು ಪ್ರತಿನಿಧಿಸುವ ಕಥಾನಕವನ್ನು ಅನಾವರಣ ಮಾಡಬೇಕು. ಇವತ್ತಿನ ಸಮಾಜ ಕೂಡ ತುಂಬ ವೇಗವನ್ನು ಬಯಸುತ್ತಿದೆ. ವೇಗದ ಬದುಕಿನಲ್ಲಿ ನಮ್ಮ ಅನೇಕ ಭಾವನೆಗಳನ್ನು ಕಳೆದುಕೊಂಡಿದ್ದೇವೆ. ತಂದೆ–ತಾಯಿ ಸೇರಿದಂತೆ ಎಲ್ಲ ಸಂಬಂಧಗಳಿಗಿಂತ ವೃತ್ತಿಗೆ ದೊಡ್ಡ ಮಹತ್ವ ಕೊಡುವಂತೆ ನಟಿಸುತ್ತಿದ್ದೇವೆ. ಅದು ತಪ್ಪು ಎನ್ನುವುದನ್ನು ಹೇಳುವ ಆಸೆ ನನಗಿದೆ. ಇವತ್ತಿನ ಪ್ರಪಂಚಕ್ಕೆ ಅದು ತುಂಬ ಅಗತ್ಯ. ಏಕೆಂದರೆ ಮಕ್ಕಳಿಗೆ ಆಡಂಬರ ಕೊಡುತ್ತಿದ್ದೇವೆ. ಅವರು ಬಯಸಿದ್ದು ಸುಲಭವಾಗಿ ಸಿಗುತ್ತಿದೆ. ಮಕ್ಕಳು ಒಂದು ಪೆನ್ನು ಬಯಸಿದರೆ ನಾಲ್ಕು ಪೆನ್ನು ತಂದುಕೊಡುವ ಪೋಷಕರೇ ಹೆಚ್ಚಿದ್ದಾರೆ. ಮೊದಲು ಪರಿಸ್ಥಿತಿ ಹೀಗೆ ಇರಲಿಲ್ಲ. ಇದರಿಂದ ನಾವು ಮಕ್ಕಳಿಗೆ ಏನು ಕಲಿಸಿಕೊಡುತ್ತಿದ್ದೇವೆ. ನಮ್ಮ ತಲೆಮಾರು ಬೆಳೆದುಬಂದ ರೀತಿ ಭಿನ್ನವಾಗಿದೆ. ನಮ್ಮ ಮಕ್ಕಳು ಬೆಳೆಯುವ ರೀತಿ ಅದಕ್ಕೆ ವಿರುದ್ಧವಾಗಿದೆ. ಮಕ್ಕಳಿಗೆ ಕಷ್ಟ ಗೊತ್ತಾಗುತ್ತಿಲ್ಲ. ಅವರು ಕಷ್ಟವನ್ನು ಅನುಭವಿಸಲಿ ಎಂದು ನಾನು ಬಯಸುವುದಿಲ್ಲ. ಆದರೆ, ಪೋಷಕರ ಪ್ರೀತಿ, ಅವರ ಭಾವನೆಯನ್ನು ಅರ್ಥಮಾಡಿಕೊಳ್ಳಬೇಕು. ಅವರಿಗೆ ಅಮ್ಮ ಅಪ್ಪನ ಶ್ರಮದ ಬೆವರಿನ ಬೆಲೆ ಗೊತ್ತಾಗಬೇಕು ಅದನ್ನು ತೆರೆಯಲ್ಲಿ ಕಟ್ಟುವ ಕನಸು ಇದೆ. ಅದಕ್ಕೆ ಸೂಕ್ತವಾದ ಕಥೆಯನ್ನು ಹೆಣೆಯಬೇಕಿದೆ.

◆ ನಟಿಯೊಬ್ಬಳಿಗೆ ವೃತ್ತಿ–ಕುಟುಂಬ ನಿರ್ವಹಣೆಯ ಸವಾಲು ಹೇಗಿರುತ್ತವೆ?

ವೃತ್ತಿ ಎನ್ನುವುದು ನನ್ನಿಷ್ಟದ ಮಾರ್ಗ. ಅದು ಯಾವತ್ತೂ ಕಷ್ಟ ಎಂದು ನನಗೆ ಅನಿಸಿಲ್ಲ. ಅವಿಭಕ್ತ ಕುಟುಂಬ ನಮ್ಮದು. ನನ್ನ ಕುಟುಂಬದ ಬೆಂಬಲ ತುಂಬ ಚೆನ್ನಾಗಿ ಇದೆ. ಹಾಗಾಗಿ ನನಗೆ ಕಷ್ಟ ಆಗಲಿಲ್ಲ. ಮನೆ ಮತ್ತು ಉದ್ಯೋಗವನ್ನು ಸಮತೋಲನ ಮಾಡಬೇಕು ಎನ್ನುವ ಸವಾಲುಗಳು ಎದುರಾಗಲಿಲ್ಲ. ನನ್ನದೇ ಆದ ಜವಾಬ್ದಾರಿಗಳನ್ನು ನಿರ್ವಹಿಸಬೇಕು ಎನ್ನುವ ಹೊಣೆಯೂ ಇತ್ತು. ಮನೆಗೆ ಹಿರಿಯ ಸೊಸೆಯಾಗಿ ಕುಟುಂಬದ ಕೆಲಸ ಮಾಡುತ್ತಾ ಮುಂದುವರಿಯುತ್ತಿದ್ದೇನೆ.

◆ ಖಳನಾಯಕಿಯರ ಕ್ರೌರ್ಯ ಅಟ್ಟಹಾಸ ಮೆರೆಯುತ್ತಿದೆ. ಇದಕ್ಕೆ ಏನು ಹೇಳುತ್ತೀರಿ?

ಈ ಪ್ರಶ್ನೆಗೆ ತುಂಬ ವೇದಿಕೆಯಲ್ಲಿ ಉತ್ತರಿಸುತ್ತಿದ್ದೇನೆ. ಜನ ಹೀಗೆಲ್ಲ ಇರುತ್ತಾರಾ? ಎಂದು ಎಲ್ಲರಿಗೂ ಅನಿಸುತ್ತದೆ. ಹಾಗೆ ಇಲ್ಲದಿರಬಹುದು. ಕ್ರೌರ್ಯ ಆ ಮಟ್ಟಕ್ಕೆ ಬಿಂಬಿತ ಆಗದೆಯೂ ಇರಬಹುದು. ಆದರೂ ಅಷ್ಟು ದೊಡ್ಡದಾಗಿ ತೋರಿಸುವ ಕಾರಣ ಕೆಡುಕಿನ ಗುಣ ಗೊತ್ತಾಗಬೇಕು. ಕೆಟ್ಟದ್ದು ಇದ್ದರೆ ಮಾತ್ರ ಒಳ್ಳೆಯದು ಗೊತ್ತಾಗುತ್ತದೆ. ತಪ್ಪು ಇದ್ದಾಗಲೇ ಸರಿ ಏನು ಎನ್ನುವುದು ಗೊತ್ತಾಗುತ್ತದೆ. ದುಷ್ಟತನ ತೋರಿಸುವ ಉದ್ದೇಶ, ಇಂತಹವರೂ ಇರುತ್ತಾರೆ ಎನ್ನುವುದನ್ನು ಹೇಳುವುದು. ಟೀವಿ ಮಾಧ್ಯಮಕ್ಕೆ ಅದರದ್ದೇ ಆದ ಅಚ್ಚುಕಟ್ಟಾದ ವ್ಯಾಕರಣ ಇದೆ ಎಂದು ಅದನ್ನು ಹೇಳಲು ಬಯಸುತ್ತೇನೆ. ಅದು ಸಿನಿಮಾಕ್ಕೂ ಅನ್ವಯವಾಗುತ್ತದೆ. ಖಳನಾಯಕತ್ವಕ್ಕೆ ಬಿಲ್ಡಪ್ ಹೆಚ್ಚು ಸಿಗುತ್ತಿದೆ.

◆ ಸೆಲೆಬ್ರಿಟಿ ಮತ್ತು ಖಾಸಗಿ ಬದುಕು ಹೇಗಿದೆ?

ಅಭಿನಯ ಮಾಡುವಾಗ ಒಂದಾದ ಮೇಲೆ ಒಂದರಂತೆ ಹಲವು ಅವಕಾಶ ಬಂದವು. ಕೃಷ್ಣ ಅವರನ್ನು ಮದುವೆ ಆದ ಮೇಲೆ ನಿರ್ಮಾಣ ಸಂಸ್ಥೆ ಯೋಚನೆ ಬಂತು. ಅದಕ್ಕೂ ಮೊದಲು ಆ ನಿರೀಕ್ಷೆ ಇರಲಿಲ್ಲ. ಸಂಸ್ಥೆಯನ್ನು ಸ್ಥಾಪಿಸಿದ ಮೇಲೆ ನಮ್ಮ ಜೊತೆ ಹಲವು ಕುಟುಂಬಗಳು ಬೆಸೆದುಕೊಂಡಿವೆ ಎನ್ನುವುದು ಸಮಾಧಾನವನ್ನು ನೀಡಿದೆ. ಇದನ್ನು ಇನ್ನೂ ದೊಡ್ಡದಾಗಿ ಮಾಡಬೇಕು ಎನ್ನುವ ಆಸೆ ಇದೆ. ಸೆಲೆಬ್ರಿಟಿ ಖಾಸಗಿ ಬದುಕಿಗೂ ಅಂತಹ ವ್ಯತ್ಯಾಸ ಇಲ್ಲ. ನನಗೆ ಎರಡೂ ಒಂದೇ, ಮುಖವಾಡ ಧರಿಸುವುದು ಇಷ್ಟ ಇಲ್ಲ. ಸಾಮಾನ್ಯಳಂತೆ ನಾನಿದ್ದೇನೆ.

■ **ರಾಘವೇಂದ್ರ ಕೆ.**